

ನಂಟೆಂದರೆ ಭಯ, ಇಲ್ಲದಿದ್ದರೆ ಕೋಲಾಹಲ ಎನ್ನುವವರ ದಾಂಪತ್ಯ ಹೇಗಿದ್ದೀತು?

ಡಾ.ವಿನೋದ ಛೆಬ್ಬಿ

# 30: ಕ್ಪ್ರೋಭಾಭಾವದವರ ದಾಂಪತ್ಯ

ಆತಂಕ ಭಾವ ಹಾಗೂ ಏಕಾಂಗಿಭಾವದ ವ್ಯಕ್ತಿಗಳ ದಾಂಪತ್ಯ ಹೇಗಿರುತ್ತದೆ ಎಂದು ತಿಳಿದುಕೊಂಡೆವು. ಈ ಎರಡೂ ಭಾವಗಳು ಒಂದೇ ವ್ಯಕ್ತಿಯಲ್ಲಿದ್ದರೆ ಅವರ ನಂಟಿನ ನಮೂನೆ ಹೇಗಿರಬಹುದು, ಹಾಗೂ ಅದು ದಾಂಪತ್ಯದ ಮೇಲೆ ಎಂಥ ಪ್ರಭಾವ ಬೀರಬಹುದು ಎಂದು ನೋಡೋಣ.

ಈ ನಮ್ಮ ಕಥಾನಾಯಕಿಯನ್ನು ಆಕೆಯ ಗಂಡ ಭೇಟಿಮಾಡಿಸಿದ. ಈಕೆಗೆ ಡಿಪ್ರೆಶನ್ ಅಂತೆ. ಮನೋವೈದ್ಯರಿಂದ ಇಸಿಟಿ, ಮಾತ್ರೆ ಕೊಡಿಸಿದರೂ ಕಡಿಮೆಯಾಗಿಲ್ಲವಂತೆ. ಮೂರು ವರ್ಷಗಳಲ್ಲಿ ಅಪ್ಪ, ಅಮ್ಮ, ಅಣ್ಣ– ಈ ಮೂವರನ್ನು ಕಳೆದುಕೊಂಡಿದ್ದಾಳೆ. ಇವಳ ಮೊದಲ ಸಂದರ್ಶನದ ತೊಂಬತ್ತು ನಿಮಿಷಗಳಲ್ಲಿ ಸುಮಾರು ಎಂಬತ್ತು ನಿಮಿಷ ಅತ್ತಿದ್ದಾಳೆ. ಈಕೆಯ ಕಥೆಯೇನು?

ಈಕೆಯ ಹೆತ್ತವರು ಮದುವೆ ಆದಾಗ ಅಮ್ಮನಿಗೆ 36, ಅಪ್ಪನಿಗೆ 40. ಪರಸ್ಪರ ಒಪ್ಪುವುದು ಒತ್ತಟ್ಟಿಗಿರಲಿ, ಇಬ್ಬರಿಗೂ ಮದುವೆಯೇ ಬೇಡವಾಗಿತ್ತು. ಯಾಕೆ? ಅಮ್ಮ ಚಿಕ್ಕವಳಿದ್ದಾಗ ಚಿಕ್ಕಪ್ಪನಿಂದ ಲೈಂಗಿಕ ಕಿರುಕಳಕ್ಕೆ ಒಳಗಾಗಿದ್ದಳು. ಗಂಡಿನ ಸಹವಾಸವನ್ನು ಧಿಕ್ಕರಿಸಿ, ಶಿಕ್ಷಕಿಯಾಗಿ ತನ್ನ ಭವಿಷ್ಯವನ್ನು ಭದ್ರಪಡಿಸಿಕೊಂಡಿದ್ದಳು. ಇನ್ನು ಅಪ್ಪ? ಅವನದೊಂದು ಚಿಕ್ಕ ವ್ಯವಹಾರ ಇತ್ತು. ಆದರೆ ಅದಕ್ಕಿಂತ ದೊಡ್ಡ ಚಟಗಳಿದ್ದವು: ಜೂಜು ಹಾಗೂ ಹೆಣ್ಣು. ಇದಕ್ಕೆ ಮದುವೆ ಅಡ್ಡಬರುತ್ತಿತ್ತು. ಹಿರಿಯರು ಬಲವಂತದಿಂದ ಮದುವೆ ಮಾಡಿಸಿಯೇ ಬಿಟ್ಟರು. ಮೊದಲ ರಾತ್ರಿ ಇಬ್ಬರದೂ ಒಂದೇ ಮಾತು: 'ನೀನು ನನಗೆ ಏನೇನೂ ಇಷ್ಟವಿಲ್ಲ!' ಹೀಗೆ ಒಲ್ಲದ ಸಂಸಾರದಲ್ಲಿ ಚೊಚ್ಚಿಲ ಗಂಡುಮಗು ಹುಟ್ಟಿತು– ಆದರೆ ಬುದ್ಧಿಮಾಂದ್ಯ. ಇಬ್ಬರಿಗೂ ಜಿಗುಪ್ಸೆ. ಮರು ಹುಟ್ಟೇ ನಮ್ಮ ಕಥಾನಾಯಕಿ. ದಂತದ ಗೊಂಬೆಯಾಗಿದ್ದಳು. ಬುದ್ಧಿಯೂ ಚುರುಕಾಗಿತ್ತು. ಆದರೇನು, ಬೇಡದ ಮದುವೆ, ವಿರಸದ ದಾಂಪತ್ಯ, ಸ್ವೇಚ್ಛೆಯ ನಡತೆ, ಮಂದಬುದ್ಧಿಯ ಗಂಡುಮಗು– ಇದರ ನಡುವೆ ಹೆಣ್ಣುಸಂತಾನ ಹುಟ್ಟಿದ್ದು ಅಕ್ಷಮ್ಯ ಅಪರಾಧವಾಯಿತು. ಅತೀವ ದುರ್ಲಕ್ಷ್ಯಕ್ಕೆ ಗುರಿಯಾಗಬೇಕಾಯಿತು. ಹಸಿವೆಯಿಂದ ಅಳುವ ಶಿಶುವಿಗೆ ಮೂತಿ ತಿವಿಯುತ್ತ, ಶಾಪ ಹಾಕುತ್ತ ಹಾಲು ಕುಡಿಸುತ್ತಿದ್ದಳು ತಾಯಿ. ಚಡ್ಡಿ ಒದ್ದೆಯಾಗಿ ಅತ್ತರೆ ಕೇಳುವವರು ಇರಲಿಲ್ಲ. ಹೆಚ್ಚು ಅತ್ತರೆ ಅಪ್ಪ ಅದರ ಬಾಯಿ ಮುಚ್ಚುತ್ತಿದ್ದ. ಸ್ನಾನವಿಲ್ಲದೆ ತಲೆಕೂದಲು ಜಡೆಗಟ್ಟಿರುತ್ತಿತ್ತು. ಮುಖಸಂಪರ್ಕ ಎಂದರೆ ಮಂದಬುದ್ಧಿಯ ಅಣ್ಣನದೊಂದೆ.

ಶಿಶುವಾದಾಗ ಅವಳ ಅನುಭವ ಹೇಗಿತ್ತು?: 'ನನಗೆ ಮುಖಗಳೇ ಕಾಣುತ್ತಿಲ್ಲ. ಕಣ್ಣಿಗೆ ಬಿದ್ದ ಕಣ್ಣುಗಳು ಕೆಕ್ಕರಿಸಿ ನೋಡುತ್ತಿವೆ. ಅದನ್ನು ಅನುಕರಿಸಲು ಭಯ ಹುಟ್ಟುತ್ತಿದೆ. ಅತ್ತೂ ಅತ್ತೂ ಸುಸ್ತಾದಾಗ ಮುಖವೊಂದು ಅಸ್ಪಷ್ಟವಾಗಿದೆ. ಕೌತುಕದಿಂದ ವೀಕ್ಷಿಸುವ ಕ್ಷಣದಲ್ಲೇ ಎಲ್ಲಿಂದಲೋ ಹಠಾತ್ತಾಗಿ ನೋವಿನ ಅಲೆ ರಭಸದಿಂದ ಹೊಡೆಯುತ್ತಿದೆ. ನನಗೆ ಮುಖ ಬೇಕು, ತಿವಿತ ಬೇಡ... ಅಳಲೂ ಧೈರ್ಯವಿಲ್ಲ – ಮುಖದೊಂದಿಗೆ ತಿವಿತವೂ ಬಂದರೆ? ಏನು ಮಾಡಲಿ? ಯಾರನ್ನು ಅನುಕರಿಸಲಿ? ಹಸಿವೆಯಾದರೆ, ಒಂಟಿಯಾದರೆ ಅಳಲೆ? ಅತ್ತರೆ ಹೊಸ ಸಂಕಟ! ಹಾಗಂತ ಸುಮ್ಮನಿದ್ದರೆ ಏನೂ ಸಿಗುವುದಿಲ್ಲವಲ್ಲ? ಒಂದು ಸಲ ಸಿಕ್ಕರೆ ಹೆಚ್ಚು ಹೊತ್ತೂ ಉಳಿಯಲಾರದು. ಬೆನ್ನಹಿಂದೆ ನೋವು ಬರುವುದಲ್ಲ? ಎರಡೂ ಸಂಕಟ. ನಂಬುವ ಹಾಗಿಲ್ಲ. ಒಟ್ಟಾರೆ ಮುಖ ಬಯಸಬಾರದು. ಬಯಸಿದರೂ ನೋವಿನ ಮೇಲೆ ಕಣ್ಣಿಟ್ಟಿರಬೇಕು. ನೋವು ಬರಬಹುದು ಎಂದು ಅಂತ ಅನ್ನಿಸಿದರೆ ನಾನೇ ದೂರವಿಡಬೇಕು... ಮನಸ್ಸೆಲ್ಲ ಕೋಲಾಹಲ... ಒಂದು ಮುಖ ಮಾತ್ರ ನನ್ನನ್ನೇ ಯಾವಾಗಲೂ ನೋಡುತ್ತಿದೆ. ಅದರ ಕಣ್ಣುಗಳು ನನ್ನ ಕಣ್ಣುಗಳ ಜೊತೆಗೆ ಕೀಲಿಸಿವೆ. ನಿರ್ಭಾವುಕ ಕಣ್ಣುಗಳು. ಅವುಗಳಲ್ಲಿ ಶಾಂತಿಯಿದೆ. ಅವು ಮರೆಯಾದಾಗ ಖಾಲಿತನ. ಅಳುತ್ತೇನೆ. ಅತ್ತಾಗ ಅದು ಕಾಣುವುದಿಲ್ಲ. ಅದು ಯಾವಾಗ ಕಾಣುತ್ತದೆ ಎಂದೂ ಗೊತ್ತಿಲ್ಲ. ಅದನ್ನು ಕಾಯುವುದು ನಿರಂತರ ಸಂಕಟ!'

ಇವಳಿಗೆ ಮೂರು ವರ್ಷ ಇರುವಾಗಿನಿಂದಲೂ ಅಣ್ಣನೊಡನೆ ಹಜಾರದಲ್ಲಿ ಕೂಡಿಹಾಕಿ ಮನೆಗೆ ಬೀಗಹಾಕಲಾಗುತ್ತಿತ್ತು . (ಮಕ್ಕಳು ಗ್ಯಾಸ್ ಹೊತ್ತಿಸುತ್ತಾರೆಂದು ಅಡುಗೆಮನೆಗೆ ಮುಂಚೆಯೇ ಬೀಗವಿತ್ತು.) ಮಕ್ಕಳು ಒಂದು ಬಾಟಲ್ ನೀರಿನೊಂದಿಗೆ ಅಮ್ಮ ಬರುವ ತನಕ ಕಾಯುತ್ತಿದ್ದರು. ಇವರ ಹಸಿವೆಯ ರೋದನಕ್ಕೆ ನೆರೆಯವರು ಕಿಟಕಿಯ ಮೂಲಕ ತಿನ್ನಿಸಿದ್ದೂ ಇದೆ. ಅಮ್ಮ ಅಡುಗೆ ಮಾಡುವಾಗ ಬೇಡಿಕೆಯ ಸ್ವರ ಎತ್ತಿದರೆ ಸಾಕು, ಅಡಿಗೆಮನೆಯಿಂದ ಸೌಟೋ ಲಟ್ಟಣಿಗೆಯೋ ರೊಯ್ಯೆಂದು ತೂರಿಬರುತ್ತಿತ್ತು – ಹಾಗೆ ಆದ ಗಾಯದ ಗುರುತು ಇನ್ನೂ ಮುಖದ ಮೇಲಿದೆ. ಎಲ್ಲದಕ್ಕೂ ಕಚ್ಚಾಡುವ ಅಪ್ಪಅಮ್ಮ ಒಂದು ವಿಷಯದಲ್ಲಿ ಏಕಾಭಿಪ್ರಾಯ ಹೊಂದಿದ್ದರು – ಮಕ್ಕಳನ್ನು ಹಿಂಸಿಸುವುದು. ಕೂತರೂ ನಿಂತರೂ ತಪ್ಪಾಗಿ ಇಬ್ಬರಿಂದಲೂ ಏಟು ಬೀಳುತ್ತಿತ್ತು. ಯಾವುದೇ ಸೇವೆಗೆ ಮುಂಚೆ ಮೂದಲಿಕೆ, ಹೀಯಾಳಿಕೆ ನಿಯಮವಾಗಿತ್ತು. ನೀವೇಕೆ ಸಾಯುತ್ತಿಲ್ಲ? ಎನ್ನುವುದು ನಿತ್ಯದ ಸಂದೇಶವಾಗಿತ್ತು. ಇಷ್ಟೆಲ್ಲದ ನಡುವೆ ಆಕೆ ತನ್ನ ಲೀಲೆಗಳಿಂದ ರಂಜಿಸುವಾಗಲೆಲ್ಲ ಅಣ್ಣ ಮುಗ್ಧನಗು ಬೀರುತ್ತಿದ್ದ.

ನಮ್ಮ ಕಥಾನಾಯಕಿಯ ಮುಂಚಿನ ವರ್ಷಗಳೆಲ್ಲ ಏಟುಗಳಿಂದ ತಪ್ಪಿಸಿಕೊಳ್ಳುವುದರಲ್ಲಿ ಕಳೆದಿವೆ. ಪ್ರೀತಿ, ಕಾಳಜಿ ಬಯಸಿದಾಗ ಸಿಕ್ಕ ತಿರಸ್ಕಾರವನ್ನು ಅವಳ ಮಾತುಗಳಲ್ಲೇ ಕೇಳಿ: 'ನಾನು ದೊಡ್ಡವಳಾದ ದಿನ ತಿಂದ ಒದೆ ಇವೊತ್ತಿಗೂ ಭಯಾನಕ ನೆನಪಾಗಿ ಕಾಡುತ್ತಿದೆ. ಮುಟ್ಟಿನ ದಿನಗಳಲ್ಲಿ ನೆಲ ಒರೆಸುವ ಬಟ್ಟೆಯನ್ನು ಉಪಯೋಗಿಸಿದ್ದೇನೆ. ನನ್ನ ಒಳ ಉಡುಪುಗಳು ತೂತು ಬಿದ್ದು ಜಾಳುಜಾಳಾದರೂ ಮೂರು ವರ್ಷ ಉಪಯೋಗಿದ್ದು ಇದೆ. ಅದೃಷ್ಟವಶಾತ್ ಅಮ್ಮ ಶಿಕ್ಷಕಿಯಾದ ಶಾಲೆಯಲ್ಲಿ ಶುಲ್ಕರಹಿತವಾಗಿ ಓದಲು ಸಾಧ್ಯವಾಯಿತು. ಇಲ್ಲದಿದ್ದರೆ ಅದೂ ಆಗುತ್ತಿರಲಿಲ್ಲ.' ಅಂತೂ ಇಂತೂ ಪಿಯುಸಿ ಮುಗಿದದ್ದೇ ತಡ ಅವಳ ಮದುವೆ ಮಾಡಿದರು. ಸುದೈವಕ್ಕೆ ಗಂಡ ಒಳ್ಳೆಯವನು. ಇವಳನ್ನು ಅರ್ಥಮಾಡಿಕೊಂಡಿದ್ದಾನೆ. ಮದುವೆಗೆ ಮುಂಚೆ ಅಪ್ಪ, ನಂತರ ಅಮ್ಮ ತೀರಿಕೊಂಡಿದ್ದು ಈಕೆಗೆ ವಿಶೇಷವೆನಿಸಿಲ್ಲ. ಆದರೆ ಅಣ್ಣನ ಸಾವು ಕಾಡುತ್ತಿದೆ. ಅವನೊಬ್ಬನೇ ಹುಟ್ಟಿನಿಂದ ಇಲ್ಲಿಯ ತನಕ ಜೊತೆಗಿದ್ದವನು. ಅವನನ್ನು ಮರೆಯಲು ಅಸಾಧ್ಯವಾಗಿ ಖಿನ್ನತೆ ಆವರಿಸಿದೆ.

ಇವಳು ದಾಂಪತ್ಯದಲ್ಲಿ ಹೇಗಿದ್ದಾಳೆ? ಇವಳಿಗೆ ಒಂಟಿತನ ಇಷ್ಟವಾದರೂ ಕಾಡುತ್ತದೆ. ಗಂಡನ ಪ್ರೀತಿಗೆ ದಿಙ್ಮೂಢತೆ ತೋರುತ್ತಾಳೆ. ಕೆಲವೊಮ್ಮೆ ವಿನಾಕಾರಣ ರೇಗುತ್ತಾಳೆ. ನಂತರ ಒಬ್ಬಳೇ ಅಳುತ್ತಾಳೆ. ಕಾಮಕೂಟ ಬೇಡವೆನ್ನುವುದಿಲ್ಲ – ಆಗ ಗಂಡನ ಮುಖಭಾವ ನೋಡುತ್ತಿರುವಾಗ ಅವಳ ತಲೆ ಗೊಂದಲದ ಗೂಡಾಗುತ್ತದೆ. ಕೂಟದ ನಂತರದ ತಿರಸ್ಕಾರದ ಭಯದಿಂದ ತಲ್ಲಣಗೊಳ್ಳುತ್ತಾಳೆ. ಅದರಿಂದ ರಕ್ಷಿಸಿಕೊಳ್ಳಲು ತಾನೇ ಅವನನ್ನು ದೂರೀಕರಿಸುವ ಭಾವನಿರ್ಧಾರ ಕೈಗೊಳ್ಳುತ್ತ, 'ನಿಮ್ಮದು ಮುಗಿಯಿತೇ?' ಎಂದು ಮತ್ತೆ ಮತ್ತೆ ಕೇಳುತ್ತಿರುತ್ತಾಳೆ. ಕೆಲವೊಮ್ಮೆ ಮೈಒಪ್ಪಿಸುವಾಗ ಹಠಾತ್ತಾಗಿ ಹಿಂಜರಿಯುತ್ತ ಅಪನಂಬಿಕೆ ತೋರುತ್ತಾಳೆ. ವಿಷಯಾಂತರ ಮಾಡುತ್ತಾಳೆ. ಅಪ್ರಚೋದಿತವಾಗಿ ಬೈಯುತ್ತಾಳೆ. ಮೊನ್ನೆ ಅವನು ಎಂಟುದಿನ ಊರಲ್ಲಿರಲಿಲ್ಲ. ತಿರುಗಿ ಬಂದು, ಡಾರ್ಲಿಂಗ್ ನಾನು ಬಂದಿದ್ದೇನೆ ಎಂದು ತಬ್ಬಿ ಮುತ್ತಿಟ್ಟಾಗ ಇವಳೇನು ಮಾಡಿದಳು? ಕೆನ್ನೆಗೇಟು ಕೊಟ್ಟಳು. ಅವನ ತುಟಿಯಿಂದ ರಕ್ತ ಒಸರಿದಾಗ ಗೊಳೋ ಎಂದು ಅತ್ತಳು. ನನ್ನನ್ನೇಕೆ ಪ್ರೀತಿಮಾಡಲು ಬರುತ್ತೀರಿ ಎಂದು ಅತ್ತೂ ಬಯ್ದೂ ಅಂದಳು.

ಇವಳ ಭಾವನಾ ತಾತ್ಪರ್ಯ ಏನಿದ್ದೀತು?: 'ನಾನೂ ಸರಿಯಿಲ್ಲ, ನೀನೂ ಸರಿಯಿಲ್ಲ. ನಿನ್ನ ಜೊತೆ ಬಾಂಧವ್ಯ ಎಂದರೆ ನನಗೆ ಭಯ. ಅದರಲ್ಲಿ ಯಾವಾಗ ನೋವು ಕಾಣುತ್ತದೋ ಗೊತ್ತಿಲ್ಲ. ಹಾಗಾಗಿ ಅದಿಲ್ಲದಾಗ ಕೊರಗುತ್ತೇನೆ. ಇರುವಾಗ ಸಂದೇಹಿಸಿ ದೂರೀಕರಿಸುತ್ತೇನೆ. ನನಗೇನು ಬೇಕು ನನಗೇ ಗೊತ್ತಿಲ್ಲ. ಅದು ಬೇಕೇ ಬೇಡವೇ ಕೂಡ ಗೊತ್ತಿಲ್ಲ.'

**ದಾಂಪತ್ಯದ ಬಗೆಗೆ ನಿಮ್ಮ ಅನಿಸಿಕೆ, ಸಮಸ್ಯೆಗಳನ್ನು ಸುಖೀ ದಾಂಪತ್ಯ ವಿಭಾಗ, ನಂ. 75, ಎಂ. ಜಿ. ರಸ್ತೆ, ಬೆಂಗಳೂರು 01 ಇಲ್ಲಿಗೆ ಕಳುಹಿಸಿ. ದಾಂಪತ್ಯ ಸಮಸ್ಯೆಗಳಿಗೆ ಉಚಿತ ಸಹಾಯವಾಣಿ 8494944888 ಗೆ ಪ್ರತಿ ಮಂಗಳವಾರ ಹಾಗೂ ಶುಕ್ರವಾರ ಬೆಳಿಗ್ಗೆ 11ರಿಂದ ಸಂಜೆ 5ರ ತನಕ ಕರೆಮಾಡಿ.**

**ಲೇಖಕರ ವಿಳಾಸ: www.medisex.org**